ಕಲಿಯುಗದಲ್ಲಿ ಏನೇನನ್ನೋ ಕಾಣುವಿರಿ ಎಂದು ಪುರಾಣ ಹೇಳುತ್ತದೆ. ಆದರೂ ಪುರಾಣವನ್ನೇನು ನಾವು ಮೀರಿಸಲಾಗುವುದಿಲ್ಲ. ಯಾಕೆಂದರೆ ಅಲ್ಲಿ ಮೂರು ನಾಲ್ಕು ತಲೆಯ ಮನುಷ್ಯರನ್ನೂ ಒಂದು ತಲೆಯವರು ಮದುವೆಯಾಗುತ್ತಿದ್ದರು. ಅರ್ಧದೇಹ ಮೀನು ಉಳಿದರ್ಧದ ಮನುಷ್ಯದೇಹದ ಮತ್ಸ್ಯಕನ್ಯೆಯರನ್ನು ಮದುವೆಯಾಗುತ್ತಿದ್ದರು. ಆದರೂ ಕಲಿಯುಗ ಈಗ ಹೊಸ ಹೊಸ ಅವತಾರ, ಪ್ರಯೋಗಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಿದೆ. ಇದು ಎಲ್ಲಿಗೆ ಕರೆದೊಯ್ಯುತ್ತದೋ ಗೊತ್ತಿಲ್ಲ. ಇರಲಿ, ಇದುವರೆಗೆ ವಸ್ತುವಿನಲ್ಲಿ ಜೀವ ಸಂಚಾರವಾದುದನ್ನು ಮತ್ತು ಅದೇ ಸಂಚಾರೀ ಭಾವಕ್ಕೇ ತಾಳಿ ಕಟ್ಟಿ ಅತ್ತಲೂ ಇಲ್ಲ ಇತ್ತಲೂ ಇಲ್ಲದಂತಾಗುವುದನ್ನು ನೋಡಿದೆವು. ಇನ್ನು ಮುಂದೆ ಸಿನಿಮಾ ಭಾಷೆಯಲ್ಲಿ ಹೇಳುವುದಾದರೆ ಪರಕಾಯ ಪ್ರವೇಶ! ಅವರು ಅಭಿನಯಿಸಲಿಲ್ಲ ಆದರೆ ಅವರು ಅದೇ ಆಗಿಬಿಟ್ಟರು ಅನ್ನೋದಕ್ಕೆ ಈ ಪದವನ್ನು ಚಿತ್ರರಂಗದ ಮಂದಿ ಸವಕಲು ಎನ್ನುವಷ್ಟು ಬಳಸಿದ್ದಾರೆ. ಅಲ್ಲಿ ಜೀವ ಇದೆಯೋ ಇಲ್ಲವೋ ಅದು ಮುಖ್ಯವಲ್ಲ, ಬದಲಿಗೆ ನಾನೇ ಅದಾಗಿಬಿಟ್ಟರೆ... ಈ ಅದಾಗುವುದು ಅಂದರೆ ಸುಲಭದ ಮಾತಲ್ಲ. ಅದನ್ನು ಅವಿನಾಭಾವ ಅಂತ ಕರೆಯಬೇಕಾಗುತ್ತೆ. ಅಂದರೆ ಚಲನೆಯೆಂಬುದು ಜಡವಾಗುವುದು. ಐಕ್ಯವಾಗುವುದು. ಅದೇ ಆಗಿಬಿಡುವುದು ಎಂದರೆ ಅರ್ಥಮಾಡಿಕೊಳ್ಳುವುದು ಹೇಗೆ? ನಿನ್ನನ್ನು ನೀನು ಬಿಟ್ಟುಕೊಡುವುದು ಎಂದು. ನಿನ್ನನ್ನು ನೀನೇ ಇಲ್ಲ ಎಂದು ಭಾವಿಸಿಕೊಂಡು ಇಲ್ಲವಾಗುವುದು. ನಾನು ಬೆಂಗಳೂರಲ್ಲಿ ಇಲ್ಲ ಚಂದ್ರಲೋಕದಲ್ಲಿರುವೆ ಎಂದು ಹೇಳಿ ಬೆಂಗಳೂರಲ್ಲಿಯೇ ಇರುವುದು. ನನ್ನ ದೇಹ ದೇಹವಲ್ಲ ಅದು ಮರ ಎಂದು ಅಂದುಕೊಂಡು ಬಿಡುವುದು!

ನಗಬೇಡಿ, ಸುಮನಾರಾಯ್ ಎಂಬ ಮಹಿಳೆ ಈಗ ಮರವಾಗಿದ್ದಾರೆ. **Seriously**, ಅವರು ಒಂದು ಪುಸ್ತಕವನ್ನೇ ಬರೆದಿದ್ದಾರೆ. **'How I became a tree '** ಅಂತ. ಈ ಪುಸ್ತಕದ ಒಂದು ಅಧ್ಯಾಯವನ್ನು ಕನ್ನಡಕ್ಕೆ ನರೇಂದ್ರ ಪೈ ಅನುವಾದಿಸಿದ್ದಾರೆ. ಅವರು ಕೊಟ್ಟಿರುವ ಒಂದೆರಡು ಹೇಳಿಕೆಗಳನ್ನು ಗಮನಿಸಿದರೆ ಅಬ್ಬಾ ಅನಿಸಿಬಿಡುತ್ತದೆ. 'ನಾನು ಒಂದು ಮರವಾಗಲು ಬಯಸಿದ್ದೇಕೆಂದರೆ ಮರಗಳಿಗೆ ಬ್ರಾ ಇಲ್ಲ' ಇದೊಂದೇ ವಾಕ್ಯ ಸಾಕು ಸ್ತ್ರೀ ಕುಲದ ಮುಜುಗರದ ಇತಿಹಾಸ ಬರೆಯುವುದಕ್ಕೆ. ಆಕೆಗೆ ಈ ಜಗತ್ತಿನ ಗಡಿಬಿಡಿ, ಸದ್ದು ಗದ್ದಲ, ನಾಟಕೀಯತೆ, ಧಾವಂತ ಎಲ್ಲವೂ ಒಂದುಸಲ ಅರ್ಥಹೀನ ಅನಿಸಿತು. ಈಗಿರೋದಕ್ಕಿಂತ ಮರವಾಗುವುದೇ ಹೆಚ್ಚು ಅರ್ಥಪೂರ್ಣ ಎನಿಸಿತು. ಅವರು ಹೇಳಿದರು 'ನಾನೇಕೆ ಮರವಾದೆನೆಂದರೆ ಮರಗಿಡಗಳು ಸುದ್ದಿಯನ್ನು ತಿನ್ನುವುದಿಲ್ಲ' ಈ ವಾಕ್ಯವೂ ಅಷ್ಟೇ. ನಮ್ಮನ್ನು ಹಿಡಿದು ನಿಲ್ಲಿಸುತ್ತದೆ. ಸುಮನಾರಾಯ್, ಮನುಷ್ಯನ ಕಾಲಪ್ರಜ್ಞೆಯೇ ಕಾಲ ಕಸ ಎಂದು ತಿಳಿದು ಗಡಿಯಾರ ಬಿಚ್ಚಿಟ್ಟರು. ಪೇಪರ್ ನೋಡಲಿಲ್ಲ. ಟಿ.ವಿ. ಬಂದ್ ಮಾಡಿದರು. ಮರದ ನೆಮ್ಮದಿಯೇ ದೊಡ್ಡದು ಅನಿಸಿತು. ಅವರು ಬರೆಯುತ್ತಾರೆ 'ಮದುವೆಗೆ ಕೆಲವೇ ದಿನಗಳಿರುವಾಗ ನೆಟ್ಟಿದ್ದ ಹಳದಿ ವರ್ಣದ ಗುಲ್‌ಮೊಹರ್ ಗಿಡ ಈಗ ಹೂವುಗಳಿಂದ ತುಂಬಿ ಮೂರಂತಸ್ತಿನ ಮನೆಗಿಂತ ದೊಡ್ಡದಾಗಿ ಬೆಳೆದು ನಿಂತಿದೆ . ಅದನ್ನು ಕಂಡಾಗಲೆಲ್ಲ ನಮ್ಮ ಮದುವೆ ಕೂಡ ಹೇಗೆಲ್ಲ ರೂಪುಗೊಳ್ಳುವುದು ಸಾಧ್ಯವಿತ್ತಲ್ಲ, ಏನೆಲ್ಲ ಅವಕಾಶಗಳಿದ್ದುವಲ್ಲ ಅನಿಸುತ್ತದೆ... ಡೆಡ್ ಲೈನ್‌ಗಳೇ ತುಂಬಿರುವ ಈ ಜಗತ್ತಿನಲ್ಲಿ ವೃಕ್ಷವೊಂದರ ಕಾಲಧರ್ಮವನ್ನು ಅನುಸರಿಸುವುದಾದರೂ ಹೇಗೆ?'

ಹೀಗೆ ಅವರ ಮಾತುಗಳನ್ನೇ ನೋಡುತ್ತ ಹೋದರೆ ಸಮಾಜಶಾಸ್ತ್ರ, ತತ್ವಶಾಸ್ತ್ರ, ಎಲ್ಲವನ್ನೂ ಒಟ್ಟಿಗೇ ಓದಿದ ಹಾಗಾಗುತ್ತದೆ. ಈಗ ಅದನ್ನೆಲ್ಲ ಓದಿಕೊಳ್ಳಲು ಸಮಯವಿಲ್ಲ. ಒಟ್ಟಿನಲ್ಲಿ ಅವರು ಮರವಾದರು. ಹಾಗೆಂದು ಭಾವಿಸಿದರು ಮತ್ತು ಅವರು ಹಾಗೇ ಇದ್ದಿರಬಹುದು. ಇದು ಕೆಲವರಿಗೆ